ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**


**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**


## 11ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ: 07-02-2011ನೇ ಸೋಮವಾರ,

ಸ್ಥಳ:

ಕೊಠಡಿ ಸಂಖ್ಯೆ:406, ನಾಲ್ಕನೇ ಮಹಡಿ,

ವಿಕಾಸ ಸೌಧ, ಬೆಂಗಳೂರು

Director: Phone/Fax: 08172-231599
Personal section: Phone/Fax: 08172-231699



ದಿನಾಂಕ:07.02.2011 ರ ಬೆಳಿಗ್ಗೆ:12:45 ಗಂಟೆಗೆ ಸನ್ಮಾನ್ಯ ಎ.ರಾಮ್‌ದಾಸ್ ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರು ಇವರ ಘನ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ:406,4ನೇ ಮಹಡಿ,ವಿಕಾಸಸೌಧ,ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಅಜೆಂಡಾ ಕ್ರಮ ಸಂಖ್ಯೆ:1**

ವಿಷಯ: ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನೇಮಿಸಿಕೊಂಡಿದ್ದ 291 ಬೋಧಕೇತರ ಸಿಬ್ಬಂದಿಯ ನೇಮಕಾತಿಯನ್ನು ಸರ್ಕಾರ ರದ್ದುಗೊಳಿಸಿದ್ದರಿಂದ ರಾಜ್ಯ ಉಚ್ಚ ನ್ಯಾಯಲಯವು ನೀಡಿದ ಆದೇಶಾನುಸಾರ ಸರ್ಕಾರ ನೀಡಿದ್ದ ಕಾರಣ ಕೇಳುವ ನೋಟೀಸಿಗೆ ಅಭ್ಯರ್ಥಿಗಳು ಉತ್ತರ ಸಲ್ಲಿಸಿದ್ದು, ಈ ಬಗ್ಗೆ ಚರ್ಚೆ ಮತ್ತು ತೀರ್ಮಾನ.

## ತೀರ್ಮಾನ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇದರ ನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

ಸಂಸ್ಥೆಯಲ್ಲಿ ಖಾಲಿ ಇದ್ದ ವಿವಿಧ 24 ಶ್ರೇಣಿಯ 307 ಬೋಧಕೇತರ ಹುದ್ದೆಗಳ ನೇಮಕಾತಿ ಮಾಡಲು ನಡೆದ ಪ್ರಕ್ರಿಯೆಯಲ್ಲಿ 22 ವಿವಿಧ ಶ್ರೇಣಿಯ 291 ಮಂದಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಇವರಲ್ಲಿ 281 ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿ ಕಾರ್ಯವರದಿ ಮಾಡಿಕೊಂಡಿದ್ದರೆಂದು ಸಭೆಗೆ ತಿಳಿಸಿದರು. ಮುಂದುವರೆದು ಈ ನೇಮಕಾತಿಯಲ್ಲಿ ಸರ್ಕಾರ ನಿಗದಿ ಪಡಿಸಿದ್ದ ನೀತಿ ನಿಯಮಗಳನ್ನು, ಸುತ್ತೋಲೆ ಸೂಚನೆಗಳು, ನೇಮಕಾತಿ ವಿಧಾನ, ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿರುವುದು ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳದೇ ಇರುವುದು ಕಂಡುಬಂದಿದ್ದರಿಂದ, ಸರ್ಕಾರದ ಆದೇಶ ಸಂಖ್ಯೆ:ಆಕುಕ:ಕೆವಿಎಂ 2010, ದಿನಾಂಕ: 26-08-2010 ರಲ್ಲಿ ಸರ್ಕಾರವು ಈ ನೇಮಕಾತಿಗಳನ್ನು ರದ್ದುಪಡಿಸಿ,ನೇಮಕಾತಿ ಹೊಂದಿದ ಎಲ್ಲಾ ಅಭ್ಯರ್ಥಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿತ್ತು. ಸರ್ಕಾರದ ಈ ಆದೇಶದ ವಿರುದ್ದ ಬಿಡುಗಡೆಗೊಂಡ ಅಭ್ಯರ್ಥಿಗಳು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ವಿಷಯವನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿದ ನಂತರ ನ್ಯಾಯಲಯವು ದಿನಾಂಕ:21-10-2010ರಂದು ನೀಡಿದ ತನ್ನ ಅಂತಿಮ ತೀರ್ಪಿನಲ್ಲಿ ಸಂಬಂಧಪಟ್ಟ ಎಲ್ಲಾ ಅಭ್ಯರ್ಥಿಗಳಿಗೂ ಸರ್ಕಾರವು ನೇಮಕಾತಿಯನ್ನು ರದ್ದುಪಡಿಸಿ ಈಗಾಗಲೇ ಹೊರಡಿಸಿರುವ ಆದೇಶಗಳನ್ನು ಕಾರಣ ಕೇಳುವ ನೋಟಿಸ್‌ಗಳನ್ನಾಗಿ ಪರಿವರ್ತಿಸಿ / ಪರಿಗಣಿಸಿ ನೇಮಕಾತಿಗಾಗಿ ಆಯ್ಕೆ ಹೊಂದಿದ ಅಭ್ಯರ್ಥಿಗಳಿಗೆ ಜಾರಿ ಮಾಡಿ, ನೋಟಿಸಿಗೆ ಅಭ್ಯರ್ಥಿಗಳು ನೀಡಿರುವ ಉತ್ತರಗಳನ್ನು ಸಂಸ್ಥೆಯ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುವುದಾಗಿ ತಿಳಿಸಿದರು.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಈ ವಿಷಯದಲ್ಲಿ ಸಂಸ್ಥೆಯ ನಿರ್ದೇಶಕರ ಅಭಿಪ್ರಾಯವೇನೆಂದು ಕೇಳಿದಾಗ, ನಿರ್ದೇಶಕರು ಈಗಾಗಲೇ ಸರ್ಕಾರಕ್ಕೆ ಅವರ ಅಭಿಪ್ರಾಯ ತಿಳಿಸಿರುವುದರಿಂದ, ಸರ್ಕಾರದ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ತಿಳಿಸಿದರು.

ನಂತರ ಸಭೆಯು ಸದರಿ ಅಭಿಪ್ರಾಯ ಮತ್ತು ಅಭ್ಯರ್ಥಿಗಳು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಲಿ ನೇಮಕಾತಿ ಪಟ್ಟಿಯನ್ನು ರದ್ದು ಮಾಡಿರುವ ಕ್ರಮವನ್ನು ಒಪ್ಪಿ ಹಾಗೂ ಈಗಾಗಲೇ ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಮೇರಿಟ್ ಆದಾರದ ಮೇಲೆ ನೇಮಕಾತಿ ಪಟ್ಟಿಯನ್ನು ಪ್ರಕಟ ಮಾಡಿ, ಸಾರ್ವಜನಿಕ ಆಕ್ಷೇಪಣೆ ಪಡೆದು, ಅಂತಿಮ ನೇಮಕಾತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದೆಂದು ತಿರ್ಮಾನಿಸಲಾಯಿತು.

**ಅಜೆಂಡಾ ಕ್ರಮ ಸಂಖ್ಯೆ: 02**

ವಿಷಯ: ಸಂಸ್ಥೆಯ ಬೈಲಾ ಕ್ರಮ ಸಂಖ್ಯೆ:11 (1) ರಂತೆ ಸಂಸ್ಥೆಯ ಶಾಶ್ವತ ಮಾನ್ಯತೆಗೆ ಕೊರತೆ ಇದ್ದ ನಾಲ್ಕು ಪ್ರಾಧ್ಯಾಪಕರುಗಳನ್ನು ನೇರ ಆಹ್ವಾನದ ಮೂಲಕ ನೇಮಿಸಿ ಕೊಂಡಿರುವುದನ್ನು ಅನುಮೋದಿಸುವ ಬಗ್ಗೆ.

## ತೀರ್ಮಾನ

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸಂಸ್ಥೆಯ ಬೈಲಾ 11(1) ರಂತೆ ಸಂಸ್ಥೆಯ ಶಾಶ್ವತ ಮಾನ್ಯತೆಗೆ ಕೊರತೆ ಇದ್ದ, ನಾಲ್ಕು ಪ್ರಾಧ್ಯಾಪಕರನ್ನು ಆಹ್ವಾನದ ಮೂಲಕ ನೇಮಿಸಿಕೊಂಡಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅನುಮೋದನೆಯನ್ನು ಪಡೆದಿರುವುದೇ ಅಲ್ಲದೆ ಈ ನೇಮಕಾತಿಯ ಬಗ್ಗೆ ದಿನಾಂಕ: 07-02-2011 ರಂದು ನಡೆದ ಸಂಸ್ಥೆಯ ಪ್ರಾಧ್ಯಾಪಕರ

ನೇಮಕಾತಿ ಸಮಿತಿ ಸಭೆಯಲ್ಲಿ ಕೂಡ ಅನುಮೋದಿಸಿರುವುದರಿಂದ, ಈ ನಾಲ್ಕು ಜನ ಪ್ರಾಧ್ಯಾಪಕರುಗಳನ್ನು ನೇರ ಆಹ್ವಾನದ ಮೂಲಕ ನೇಮಿಸಿಕೊಂಡಿರುವುದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

ಪ್ರಧಾನ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ,
ವಿಧಾನ ಸೌಧ,
ಬೆಂಗಳೂರು.

ಅಧ್ಯಕ್ಷರು,
ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.